# ಇರುವೆ ಇರುವೆ ನೀನೆಲ್ಲೆಲ್ಲೂ ಇರುವೆ



**ಕಿರುಬೆರಳ ತುದಿಯಲ್ಲಿ ಇರುವೆಯನ್ನು ಅಳಿಸಿಬಿಡಬಹುದಾದರೂ, ಅದರ ಮಹಿಮೆಯನ್ನು ಅಳಿಸುವುದು ಅಸಾಧ್ಯ. ಇರುವೆಗಳ ಶಿಸ್ತು, ಸಹಜೀವನದ ಸೊಗಸು ಹಾಗೂ ಕಾರ್ಯಕ್ಷಮತೆ ಪಾಠದಂತಿದ್ದರೂ, ಮನುಷ್ಯ ಕಲಿತಿರುವುದು ಅವುಗಳ ಉಪಟಳ ಕೊಡುವ ಗುಣವನ್ನಷ್ಟೇ!**

**■ ಎಚ್.ಎಸ್. ನವೀನ್ ಕುಮಾರ್**

ಊರಿಗೆ ಹೋಗಿದ್ದ ನನ್ನ ಶ್ರೀಮತಿ ಮರಳಿ ಮನೆಗೆ ಬಂದಾಗ, ನನ್ನ ಉಸ್ತುವಾರಿಯಲ್ಲಿ ಎಂದಿನಂತೆ ಅಸ್ತವ್ಯಸ್ತವಾಗಿದ್ದ ಅಡುಗೆಮನೆಯನ್ನು ಸರಿ ಮಾಡುವ ಕಾಯಕದಲ್ಲಿ ತೊಡಗಿದ್ದಳು. ಆಗ ಟೆನ್ಷನ್ ಇಮ್ಮಡಿಗೊಳಿಸಿದ್ದು ಗೃಹಿಣಿಯರ ಪರಮವೈರಿಗಳಾದ ಇರುವೆಗಳು. ಯಾವುದೇ ಕ್ಷಣದಲ್ಲಿ ಯಾವುದೇ ವಸ್ತುವಿನ ಮೇಲಾದರೂ ದಾಳಿಯಿಡುವ ಸಾಮರ್ಥ್ಯ ಇರುವ ಇರುವೆಗಳು ಈ ಬಾರಿ ಮುತ್ತಿಗೆ ಹಾಕಿದ್ದು ಅವಳು ಕಾಯಿಸಿ ಡಬ್ಬದಲ್ಲಿಟ್ಟಿದ್ದ ತುಪ್ಪವೆಂಬ ಅತ್ಯಮೂಲ್ಯ ವಸ್ತುವಿಗೆ! ಉಗ್ರರು ಯಾವುದೇ ಸೂಚನೆ ಕೊಡದೆ ದಾಳಿ ಮಾಡಿದಂತೆ ಆಕ್ರಮಣ ಮಾಡುವ ಈ ಶತ್ರುಗಳ ಮೇಲೆ ಯುದ್ಧ ಘೋಷಣೆಯೇ ಉಳಿದಿರುವ ಏಕೈಕ ಮಾರ್ಗ ಎನ್ನುವುದು ಅವಳ ದೃಢ ನಿಲುವಾಗಿತ್ತು. ಶತ್ರು ಸಂಹಾರಕ್ಕೆ ಹೆಚ್ಚಿನ ಸೇನಾಬಲದ ಅವಶ್ಯಕತೆ ಇದೆ ಎಂದರಿತ ಶ್ರೀಮತಿ ನನಗೆ ಹಾಗೂ ಪುಟ್ಟಿಗೆ ಶಸ್ತ್ರಸನ್ನದ್ಧರಾಗುವಂತೆ ವಾರ್ ನೋಟಿಸ್ ನೀಡಿದಳು. ಗಡಿ ನಿಯಂತ್ರಣ ರೇಖೆಯನ್ನು ದಾಟಿ ಸಾಲುಗಟ್ಟಿ ಬರುತ್ತಿದ್ದ ಈ ಅತಿಕ್ರಮಣಕಾರರು ತಮ್ಮ ದಿಕ್ಕು ಬದಲಿಸಿದ್ದು, ಲಕ್ಷ್ಮಣರೇಖೆ ಎಂಬ ರಾಸಾಯನಿಕ ಆಯುಧದ ಬಳಕೆಯಾದ ನಂತರವೇ!

ನಿಮ್ಮದು ಸ್ವಂತ ಮನೆಯಾಗಿರಬಹುದು ಅಥವಾ ಬಾಡಿಗೆ ಮನೆಯಾಗಿರಬಹುದು, ಆದರೆ ಅದಕ್ಕೆ ಪ್ರವೇಶ ಇಂತಿಂಥವರಿಗೆ ಮಾತ್ರ ಎಂಬ ನಿರ್ಣಯವನ್ನು ನೀವು ನೂರಕ್ಕೆ ನೂರು ಖಂಡಿತ ಮಾಡಲು ಸಾಧ್ಯವಿಲ್ಲ. ಆಜ್ಞೆ, ಅನುಮತಿ, ಆಹ್ವಾನ – ಯಾವುದೇ ಬಂಧನಗಳಿಗೂ ಒಳಪಡದ ಕೆಲವು ಜೀವಿಗಳು, ನೀವು ಸಂಪೂರ್ಣ ನಿಮ್ಮದೆಂದು ಭಾವಿಸಿ ಭದ್ರವಾಗಿ ಕೂಡಿಟ್ಟ ಪದಾರ್ಥಗಳ ಮೇಲೆ ನಿರ್ಭೀತಿಯಿಂದ ದಾಳಿ ಇಡುತ್ತವೆ. ಸುಭದ್ರ ಗಡಿ ಗೋಡೆಗಳನ್ನು ದಾಟಿ ಒಳ ನುಗ್ಗಿ 'ನಾಳೆಗಾದೀತು' ಎಂದು ತೆಗೆದಿರಿಸಿದ್ದ ನಿಮ್ಮಿಷ್ಟದ ಮೈಸೂರ್ ಪಾಕಿನಲ್ಲೋ, ಕಾಯಿಹೋಳಿಗೆಯಲ್ಲೋ ನೂರಾರು ಗುಹೆಗಳನ್ನು ಕೊರೆದು ಅದನ್ನು ತಿನ್ನಲಾಗದಂತೆ ಮಾಡಿ ನಿಮ್ಮನ್ನು ನಿರಾಸೆಗೆ ದೂಡುತ್ತವೆ. ಸಸ್ಯಾಹಾರ, ಮಾಂಸಾಹಾರಗಳೆಂದು ಭೇದವೆಣಿಸದೆ, ನಿಮ್ಮ ಒಪ್ಪಿಗೆಗೂ ಕಾಯದೇ ನಿಮ್ಮ ಜೊತೆ ಸಹಭೋಜನದಲ್ಲಿ ಮಗ್ನವಾಗಿಬಿಡುವ ಇರುವೆಗಳಿಗೆ ಆಹಾರದ ಪರಿಮಳ, ಎಣ್ಣೆ ಜಿಗುಟು ಇತ್ಯಾದಿಗಳೇ ಆಹ್ವಾನ. ತಿನ್ನುವ ವಸ್ತುಗಳನ್ನು ಬಾಟಲಿ ಡಬ್ಬಗಳ ಒಳಗಿಟ್ಟು ಗಟ್ಟಿಯಾಗಿ ಮುಚ್ಚಳ ಜಡಿದರೂ, ಸಿಗುವ ಅತಿ ಸಣ್ಣ ದಾರಿಯನ್ನೇ ಹುಡುಕಿ, ಓಬವ್ವನ ಕಿಂಡಿಯಲ್ಲಿ ಶತ್ರುಗಳು ನುಸುಳಿ ಬಂದಂತೆ ಈ ಅನಪೇಕ್ಷಿತ ಅತಿಥಿಗಳು ಒಳ ನುಗ್ಗಿ ಬರುವುದು ಖಚಿತ!

ಇರುವೆಗಳ ಶಿಸ್ತು, ಸಂಘಜೀವನ, ಅತಿ ಸಣ್ಣ ದೇಹವಿದ್ದರೂ ಅದಕ್ಕಿಂತಲೂ ಎಷ್ಟೋ ದೊಡ್ಡ ಪಟ್ಟು ಭಾರ ಹೊರುವ ಅವುಗಳ ಅಪಾರ ಕ್ಷಮತೆ, ನಾಳೆಯ ಅಗತ್ಯಕ್ಕೆ ಕೂಡಿಡುವ ಉಳಿತಾಯದ ಮನೋಭಾವ – ಇವುಗಳಿಂದ ಕಲಿಯಬೇಕಾದ್ದು ಬಹಳ ಇದೆ. ಆದರೆ, ಎಷ್ಟೋ ಸಾರಿ ಉಪಟಳ ತಾಳಲಾರದೇ ರಾಸಾಯನಿಕಗಳನ್ನು ಸಿಂಪಡಿಸಿ ಇವುಗಳನ್ನು ಸಾಯಿಸಿ, ಮನಸ್ಸು ಒಪ್ಪದಿದ್ದರೂ ಪ್ರಾಣಿಹಿಂಸೆ ಮಾಡಿ ಸಂತೋಷಪಡುವಂತಾಗುತ್ತದೆ. ಎಷ್ಟು ಸಾಯಿಸಿದರೂ ರಕ್ತ ಬೀಜಾಸುರನ ಸಂತತಿಯಂತೆ ಮತ್ತೆ ಮತ್ತೆ ಹಿಂಡು ಹಿಂಡಾಗಿ ಹುಟ್ಟಿ ಬರುವ ಇವುಗಳನ್ನು ಕಂಡು ಅಸಹಾಯಕರಾಗಿ ಕೈ ಕೈ ಹೊಸಕಿಕೊಳ್ಳುವಂತಾಗುತ್ತದೆ ಕೂಡ.

ಇರುವೆಗಳು ಸರ್ವಾಂತರ್ಯಾಮಿಗಳು. ನಗರ–ಹಳ್ಳಿಗಳೆಂಬ ಭೇದ ತೋರದೇ, ಶ್ರೀಮಂತ ಬಡವರೆಂಬ ವ್ಯತ್ಯಾಸವಿಲ್ಲದೇ ಎಲ್ಲಾ ಕಡೆಗಳಲ್ಲಿ, ಎಲ್ಲರ ಮನೆಗಳಲ್ಲಿ ಠಿಕಾಣಿ ಹೂಡುವುದೇ ಇವುಗಳ ಜಾಯಮಾನ. ಹಾಸಿಗೆ, ಹೊದಿಕೆಗಳ ಒಳ ಸೇರಿ, ಇಂಜೆಕ್ಷನ್ ಸೂಜಿಯ ಹಾಗೆ ನಮ್ಮನ್ನು ಚುಚ್ಚಿ